ಸಂಯುಕ್ತ ಕರ್ನಾಟಕ

# ಹಿರೇಮಠ, ನಂದಗೋಪಾಲಗೆ ಹಾಲಭಾವಿ ಪ್ರಶಸ್ತಿ





**ಧಾರವಾಡ:** ನಗರದ ಕೆಲಗೇರಿಯ ಜೆಎಸ್‌ಎಸ್ ಹಾಲಭಾವಿ ಮಹಾವಿದ್ಯಾಲಯ ನೀಡುವ ಕಲಾಗುರು ಡಿ.ವಿ. ಹಾಲಭಾವಿ ಗೌರವ ಪ್ರಶಸ್ತಿ 2014ಕ್ಕೆ ಈ ಬಾರಿ ಡಾ. ಚೂಡಾಮಣಿ ನಂದಗೋಪಾಲ ಮತ್ತು 2015ರ ಪ್ರಶಸ್ತಿಗೆ ಡಾ. ಬಿ.ಕೆ. ಹಿರೇಮಠ ಆಯ್ಕೆಯಾಗಿದ್ದಾರೆ. ಬೆಂಗಳೂರಿನ ಜೈನ ವಿಶ್ವವಿದ್ಯಾಲಯದ ಮಾನವಿಕ ಮತ್ತು ಸಾಮಾಜಿಕ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಡಾ. ಚೂಡಾಮಣಿ ನಂದಗೋಪಾಲ ಸೇವೆ ಸಲ್ಲಿಸುತ್ತಿದ್ದಾರೆ. ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಲ್ಲಿ ವಸಾಹತು ಚಿತ್ರಕಲೆಗಳ ಸಂಗ್ರಹ ಹಾಗೂ ದಕ್ಷಿಣ ಭಾರತದ ದೇವಾಲಯಗಳ ಸಾಂಪ್ರದಾಯಿಕ ಆಭರಣಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿದ ಹಿನ್ನೆಲೆಯಲ್ಲಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಡಾ. ಬಿ.ಕೆ. ಹಿರೇಮಠ ಅವರು ಬಾಗಲಕೋಟೆಯ ಬಸವೇಶ್ವರ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ, ಕನ್ನಡ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥ, ಗದಗಿನ ವಿಜಯ ಕಲಾಮಂದಿರದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕನ್ನಡದ ಹಸ್ತಪ್ರತಿಗಳು: ಒಂದು ಅಧ್ಯಯನ ಅವರ ಸಂಶೋಧನ ಗ್ರಂಥವಾಗಿದೆ. 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರ ಸೇವೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.